## ನೋಂದಣಿ ಶುಲ್ಕ

೧. ಪ್ರಾಧ್ಯಾಪಕರು/ಸಂಶೋಧಕರು – ೫೦೦
೨. ಸಂಶೋಧನಾ ವಿದ್ಯಾರ್ಥಿಗಳಿಗೆ – ೨೦೦
೩. ವಿದ್ಯಾರ್ಥಿಗಳಿಗೆ – ೧೦೦

ವಿಚಾರ ಸಂಕಿರಣದ ದಿನಾಂಕ : ೦೧, ೦೨ ಏಪ್ರಿಲ್ ೨೦೨೦
ವಿಷಯ ಮಂಡನೆ ಶೀರ್ಷಿಕೆ ತಿಳಿಸುವ ಕೊನೆ ದಿನ: ೨೦-೦೩-೨೦೨೦
ಪೂರ್ಣ ಲೇಖನ ಸಲ್ಲಿಸುವ ಕೊನೆ ದಿನ : ೨೮-೦೩-೨೦೨೦

## ನೋಂದಣಿ ವಿವರ

೧. ನೋಂದಣಿ ಶುಲ್ಕವನ್ನು ಆಯುಕ್ತರು, ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೂಡಲಸಂಗಮ ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಡಿ.ಡಿಯನ್ನು ತೆಗೆದುಕೊಳ್ಳುವ ಅಂತಿಮ ದಿನಾಂಕ:೨೯-೦೩-೨೦೨೦.

೨. ನೋಂದಣಿ ಶುಲ್ಕವು ವಿಚಾರ ಸಂಕಿರಣದ ಸಾಮಗ್ರಿಗಳನ್ನು, ಉಪಾಹಾರ, ಊಟ ಹಾಗೂ ವಸತಿ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

## ಸಲ್ಲಿಸಬೇಕಾದ ನಮೂನೆಗಳು

೧. ಪರಿವಿಡಿಯು ಕನಿಷ್ಠ ಪಕ್ಷ ೫೦೦ ಶಬ್ದಗಳನ್ನು ಒಳಗೊಂಡಿರಬೇಕು.

೨. ಪರಿಪೂರ್ಣ ಲೇಖನವು ೩೦೦೦ - ೩೫೦೦ ಶಬ್ದಗಳನ್ನೊಳಗೊಂಡಿದ್ದು ನುಡಿ-೦೧ ಇದ್ದು ೧೪ ಅಕ್ಷರ ವಿನ್ಯಾಸದಲ್ಲಿದ್ದು ೧.೫ ಅಂತರದಲ್ಲಿ ಸಾಲುಗಳಿರಬೇಕು.

೩. ಮಾರ್ಜಿನ್ ಎಡದಿಂದ ಬಲಕ್ಕೆ ೧.೫, ೧.೦ ಮೇಲೆ ಮತ್ತು ಕೆಳಗೆ

೪. ಲೇಖನಗಳನ್ನು ಸಲ್ಲಿಸಬೇಕಾದ ಇ-ಮೇಲ್ ಐಡಿ
avakkudalasangam@gmail.com
ಆಯ್ಕೆಯಾಗುವ ಲೇಖನಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

## ಕೂಡಲಸಂಗಮ ಸಮೀಪದ ಪ್ರೇಕ್ಷಣೀಯ ಸ್ಥಳಗಳು

ಕೂಡಲಸಂಗಮ ದಿಂದ ಐಹೊಳೆ ೩೫ ಕೀ.ಮಿ
ಕೂಡಲಸಂಗಮ ದಿಂದ ಪಟ್ಟದಕಲ್ಲು ೫೦ ಕೀ.ಮಿ
ಕೂಡಲಸಂಗಮ ದಿಂದ ಬದಾಮಿ ೭೦ ಕೀ.ಮಿ
ಕೂಡಲಸಂಗಮ ದಿಂದ ಆಲಮಟ್ಟಿ ೩೨ ಕೀ.ಮಿ
ಕೂಡಲಸಂಗಮ ದಿಂದ ವಿಜಯಪುರ ೯೧ ಕೀ.ಮಿ

## ಸಂಘಟನಾ ಸಮಿತಿ

| | | |
|---|---|---|
| ೧. | ಡಾ. ಸ.ಚಿ.ರಮೇಶ, ಕುಲಪತಿಗಳು | |
| ೨. | ಡಾ. ಸುಬ್ಬಣ್ಣ ರೈ, ಕುಲಸಚಿವರು | |
| ೩. | ಡಾ.ಎಸ್.ಆರ್.ಚನ್ನವೀರಪ್ಪ, ಮುಖ್ಯಸ್ಥರು, ಸಂಚಾಲಕರು | -೯೪೮೦೭೨೮೪೦೯ |
| ೪. | ಡಾ. ಶರಣು ಎಲ್. ಪಾಟೀಲ, ಸಹ ಸಂಚಾಲಕರು | -೯೪೮೦೯೯೪೧೪೨ |
| ೫. | ಡಾ. ನಾಗರಾಜ ನಾಡಗೌಡರ, ಸದಸ್ಯ ಕಾರ್ಯದರ್ಶಿ | -೯೮೮೦೭೬೮೬೨೨ |
| ೬. | ಶ್ರೀ ಶ್ರೀಧರ ಗೌಡರ, ಸದಸ್ಯ ಕಾರ್ಯದರ್ಶಿ | -೯೪೮೦೨೨೬೩೭೨ |
| ೭. | ಶ್ರೀ ಆದಪ್ಪ ಗೋರಚಿಕನವರ, ಸದಸ್ಯ ಕಾರ್ಯದರ್ಶಿ | -೯೪೮೨೮೧೯೬೦೮ |
| ೮. | ಶ್ರೀ ನಾಗರಾಜ ವಾಲಿಕಾರ, ತಾಂತ್ರಿಕ ಸಹಾಯಕರು | -೭೪೧೧೮೧೫೫೧೩ |



# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ
## ಕೂಡಲಸಂಗಮ

ಹಾಗೂ

## ಕೂಡಲಸಂಗಮ ಅಭಿವೃದ್ಧಿ ಮಂಡಳಿ
## ಕೂಡಲಸಂಗಮ

ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ

# "ವಚನ ಸಾಹಿತ್ಯ : ವಿವಿಧ ಆಯಾಮಗಳು"

ದಿನಾಂಕ : ೦೧, ೦೨ ಏಪ್ರಿಲ್ ೨೦೨೦

ಸ್ಥಳ :
ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ,
ಕೂಡಲಸಂಗಮ

ಸರ್ವರಿಗೂ ಸ್ವಾಗತ

**ರಾಜಶ್ರೀ ಬಿ. ಅಗಸರ,** ಕೆ.ಸಿ.ಎಸ್.
ಆಯುಕ್ತರು
ಕೂಡಲಸಂಗಮ ಅಭಿವೃದ್ಧಿ ಮಂಡಳಿ

**ಡಾ. ಎ.ಸುಬ್ಬಣ್ಣ ರೈ**
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಎಸ್.ಆರ್. ಚನ್ನವೀರಪ್ಪ**
ಮುಖ್ಯಸ್ಥರು ಮತ್ತು ಸಂಚಾಲಕರು

**ಡಾ. ಶರಣು.ಎಲ್.ಪಾಟೀಲ**
ಸಹ ಸಂಚಾಲಕರು

## ಕೂಡಲಸಂಗಮ

ಕೂಡಲಸಂಗಮವು ಬಸವಣ್ಣನವರ ಐಕ್ಯ ಸ್ಥಳವಾಗಿದ್ದು ಲಿಂಗಾಯತ ಪಂಗಡದವರಿಗೆ ಪ್ರಮುಖ ಪುಣ್ಯಕ್ಷೇತ್ರವಾಗಿದೆ. ಬಸವಣ್ಣನವರು ಚಿಕ್ಕ ವಯಸ್ಸಿನಲ್ಲಿ ಇಲ್ಲಿಗೆ ಬಂದು ಶಿಕ್ಷಣ ಮತ್ತು ಮಾರ್ಗದರ್ಶನ ಪಡೆದರು. ಇಲ್ಲಿ ಕೃಷ್ಣಾ ನದಿ ಮತ್ತು ಮಲಪ್ರಭಾ ನದಿ ವಿಲೀನವಾಗಿ ಪೂರ್ವ ದಿಕ್ಕಿನಲ್ಲಿ ಆಂಧ್ರಪ್ರದೇಶ ರಾಜ್ಯದ ಶ್ರೀಶೈಲದ ಕಡೆಗೆ ಹರಿಯುತ್ತದೆ. ಕರ್ನಾಟಕ ಸರಕಾರವು ಇದನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿಗೊಳಿಸಿದೆ. ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಈ ಪುಣ್ಯಸ್ಥಳದ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದೆ.

ಕೂಡಲಸಂಗಮ ಸುಕ್ಷೇತ್ರವು ಹಿನ್ನಲೆಯನ್ನೊಳಗೊಂಡ ಸುಪ್ರಸಿದ್ಧ ಸಂಗಮೇಶ್ವರ ದೇವಾಲಯವನ್ನು ಹೊಂದಿದ ಧಾರ್ಮಿಕ ಸ್ಥಾನ. ಕೃಷ್ಣಾ ಮಲಪ್ರಭಾ ನದಿಗಳ ಸಂಗಮದಿಂದಾಗಿ ಇದೀಗ ಬಸವಸಾಗರ ಜಲಾಶಯದ ನಿರ್ಮಾಣದಿಂದಾಗಿ ಪ್ರಾಕೃತಿಕ ಚೆಲುವಿನಿಂದ ಶೋಭಿಸುತ್ತಿರುವ ಸುಂದರ ತಾಣ, ಚಿನ್ನಕ್ಕೆ ಸುವಾಸನೆ ಬಂದಂತೆ ಇಂತಹ ಕ್ಷೇತ್ರದ ಮಹಿಮೆ ವಿಶ್ವವಿಖ್ಯಾತಿಯನ್ನು ಹೊಂದುವಂತಾಗಿದೆ. ವಿಶ್ವಗುರು ಬಸವಣ್ಣನವರ ಪಾದಸ್ಪರ್ಶದಿಂದಾಗಿ ಕೂಡಲಸಂಗಮ ಕರ್ನಾಟಕದ ಪ್ರಮುಖ ಪ್ರವಾಸಿ ತಾಣವಾಗಿದೆ. ರಾಷ್ಟ್ರೀಯ ಹೆದ್ದಾರಿ ೫೦ ರಿಂದ ರಸ್ತೆ ಸಂಪರ್ಕವಿದೆ. ಕೂಡಲಸಂಗಮಕ್ಕೆ ನೇರವಾಗಿ ರೈಲ್ವೆ ಸಂಪರ್ಕವಿರುವುದಿಲ್ಲ ಕೂಡಲಸಂಗಮಕ್ಕೆ ರೈಲಿನ ಮೂಲಕ ಬರಬೇಕಿದ್ದರೆ ಬಾಗಲಕೋಟೆ, ಬದಾಮಿ, ಆಲಮಟ್ಟಿಗೆ ಬಂದು ಅಲ್ಲಿಂದ ರಸ್ತೆ ಮಾರ್ಗವಾಗಿ ಬರಬೇಕು ಕೂಡಲಸಂಗಮದಲ್ಲಿ ತಂಗಲು ಯಾತ್ರಿ ನಿವಾಸವಿದೆ. ಸರಕಾರಿ, ಪ್ರಾಧಿಕಾರದ ಅತಿಥಿಗೃಹ, ಉಪಾಹಾರ ಗೃಹಗಳಿವೆ. ಮಧ್ಯಾಹ್ನ ಮತ್ತು ರಾತ್ರಿ ದಾಸೋಹದ ವ್ಯವಸ್ಥೆ ಇದ್ದು ಪ್ರವಾಸಿಗರ ನೆರವಿಗಾಗಿ ಮಾಹಿತಿ ಕೇಂದ್ರ ಸಹ ಇದೆ.

ಈಗ ಕೂಡಲಸಂಗಮವು ಅಂತರಾಷ್ಟ್ರೀಯ ಬಸವ ಕೇಂದ್ರವಾಗಿ ಹೊರಹೊಮ್ಮುತ್ತಿದ್ದು ಕರ್ನಾಟಕ ಸರಕಾರವು ಬಸವ ಗೋಪುರ/ ಬಸವ ಅಂತರಾಷ್ಟ್ರೀಯ ಕೇಂದ್ರವನ್ನು ನಿರ್ಮಿಸಿದೆ. ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಮುಳುಗಡೆಯಾಗಿರುವ ಐಕ್ಯ ಮಂಟಪವನ್ನು ವಿಶಿಷ್ಟ ರೀತಿಯ ಆಧುನಿಕ ವಾಸ್ತು ಶಿಲ್ಪದಲ್ಲಿ ಸಂರಕ್ಷಿಸಲಾಗಿದೆ. ಜೀವಿತದಲ್ಲಿ ಒಮ್ಮೆ ಸಂದರ್ಶಿಸಬೇಕಾದ ಸ್ಥಳವಿದು.

## ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಪಂಚದಲ್ಲಿ ಭಾಷೆಗಾಗಿಯೇ ಇರುವ ಏಕೈಕ ವಿಶ್ವವಿದ್ಯಾಲಯವೆಂಬ ಹೆಮ್ಮೆಯೊಂದಿಗೆ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಬದುಕಿನ ವಿವೇಕದಂತೆ ಕೆಲಸ ಮಾಡಿದೆ ಕರ್ನಾಟಕ ಸರಕಾರ ಕೊಡಮಾಡಿದ ಸುಮಾರು ಏಳುನೂರು ಎಕರೆಯಷ್ಟು ವಿಸ್ತಾರದಲ್ಲಿ ತ್ರಿಪದಿ, ಕೂಡಲಸಂಗಮ, ಕವಿರಾಜಮಾರ್ಗ, ಕ್ರಿಯಾಶಕ್ತಿ, ಭುವನವಿಜಯ ತುಂಗಭದ್ರಾ, ಅನನ್ಯ, ಅಸ್ಮಿತ, ಅಕ್ಷರ ಗ್ರಂಥಾಲಯದಂಥ ಭವ್ಯ ಕಟ್ಟಡಗಳಿವೆ. ಮರೆತು ಹೋಗಬಹುದಾಗಿದ್ದ ನಮ್ಮ ದೇಸಿ ಮಾರ್ಗದ ಹೆಸರುಗಳನ್ನು ಕಟ್ಟಡಗಳಿಗೆ ಇಟ್ಟು ಯುವಕರ ಭಾವಕೋಶದಲ್ಲಿ ಉಳಿಯುವಂತೆ ಮಾಡಿದೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಭೌತಿಕ ಭದ್ರ ಬುನಾದಿಯನ್ನು ಹಾಕಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರು ಕನ್ನಡ ವಿಶ್ವವಿದ್ಯಾಲಯ ಕೇವಲ ವಿದ್ಯೆಯನ್ನು ನೀಡುವುದಕ್ಕೆ ಸೀಮಿತವಲ್ಲ ವಿದ್ಯೆಯನ್ನು ಸೃಷ್ಟಿಸುವ ಕೇಂದ್ರವೆಂದು ಕರೆಯುತ್ತ ವಿಶ್ವವಿದ್ಯಾಲಯದ ಆಶಯ ಸ್ವರೂಪವನ್ನು ನಿರ್ಧರಿಸಿ ಅದಕ್ಕೆ ಅನುಗುಣವಾಗಿಯೇ ಬುನಾದಿ ಹಾಕಿರುವರು. ಹಿಂದೆ ವಿದ್ಯಾನಗರವಾಗಿದ್ದ ಈ ಪ್ರದೇಶ ನಂತರ ಸಾಮ್ರಾಜ್ಯ ವಿಸ್ತಾರದಿಂದ ವಿಜಯನಗರವಾಗಿ ಈಗ ವಿದ್ಯಾರಣ್ಯವಾಗಿದೆ ಎಂಬ ಮಾತು ಚರಿತ್ರೆಯನ್ನು ನೆನಪಿಸುತ್ತದೆ. ಕನ್ನಡಿಗರ ನೂರಾರು ಕನಸುಗಳನ್ನು ಸಾಕಾರಗೊಳಿಸಲೆಂದು ಹುಟ್ಟಿದ ವಿಶ್ವವಿದ್ಯಾಲಯ ಕನ್ನಡದ ಕೆಲಸವನ್ನು ಕಾಲ ಬಯಸಿದಂತೆ ಮಾಡುತ್ತ ಬಂದಿದೆ. ಕನ್ನಡ ವಿಶ್ವವಿದ್ಯಾಲಯವನ್ನು ಭೌತಿಕವಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರು ಕಟ್ಟಿದ್ದರೆ, ಬೌದ್ಧಿಕವಾಗಿ ಡಾ. ಎಂ.ಎಂ.ಕಲಬುರ್ಗಿಯವರು ಸಮರ್ಥವಾಗಿ ಕಟ್ಟಿದರು. ಅದನ್ನು ಮುಂದುವರೆಸಿಕೊಂಡು ವಿಶ್ವವಿದ್ಯಾಲಯದ ಆಶಯಕ್ಕೆ ದಕ್ಕೆಯಾಗದಂತೆ ಡಾ. ಎಚ್.ಜೆ.ಲಕ್ಕಪ್ಪಗೌಡ, ಡಾ. ಬಿ.ಎ.ವಿವೇಕ ರೈ, ಡಾ. ಎ.ಮುರಿಗೆಪ್ಪ, ಡಾ. ಹಿ.ಚಿ.ಬೋರಲಿಂಗಯ್ಯ, ಡಾ. ಮಲ್ಲಿಕಾ ಎಸ್. ಘಂಟಿ ಇವರೆಲ್ಲರೂ ಕುಲಪತಿಗಳಾಗಿ ದುಡಿದಿರುವರು. ಪ್ರಸ್ತುತ ಡಾ. ಸ.ಚಿ.ರಮೇಶ ಅವರು ಕುಲಪತಿಗಳಾಗಿ ವಿಶ್ವವಿದ್ಯಾಲಯವನ್ನು ಮುನ್ನಡೆಸುತ್ತಿದ್ದಾರೆ. ನಾಲ್ಕು ನಿಕಾಯಗಳಿಂದ ಪ್ರಾರಂಭವಾದ ವಿಶ್ವವಿದ್ಯಾಲಯ ಅಧ್ಯಯನಕ್ಕೆ ಪೂರಕವಾಗಿ ಇಪ್ಪತ್ತು ವಿಭಾಗಗಳನ್ನು ಪ್ರಾರಂಭಿಸಿದೆ. ಸಂಶೋಧನೆ ಬೋಧನಾ ಕಾರ್ಯವನ್ನು ಸಾಂಪ್ರದಾಯಿಕ ವಿಶ್ವವಿದ್ಯಾಲಯದಂತೆ ಮಾಡದೆ ಭಿನ್ನವಾದ ರೀತಿಯಲ್ಲಿ ಪ್ರಾರಂಭಿಸಿ ಮುಂದುವರೆಸಿದೆ. ವಿಶ್ವವಿದ್ಯಾಲಯದ ಆತ್ಮದಂತಿರುವ ಪ್ರಸಾರಾಂಗ ಸುಮಾರು ಒಂದು ಸಾವಿರದ ಎರಡು ನೂರು ಪುಸ್ತಕಗಳನ್ನು ಪ್ರಕಟಿಸುವುದರ ಮೂಲಕ ಜ್ಞಾನ ಪ್ರಸಾರವನ್ನು ಅರ್ಥಪೂರ್ಣವಾಗಿ ಮಾಡುತ್ತಿದೆ. ವಿಶ್ವವಿದ್ಯಾಲಯದ ಒಳಗಡೆಯ ಮತ್ತು ವಿಶ್ವವಿದ್ಯಾಲಯದ ಹೊರಗಿರುವ ನಾಡಿನ ಹೆಸರಾಂತ ವಿದ್ವಾಂಸರು, ಚಿಂತಕರ ಮೂಲಕ ಮೌಲಿಕವಾದ ಗ್ರಂಥಗಳನ್ನು ಪ್ರಕಟಿಸುತ್ತ ತನ್ನ ಬಹುತ್ವದ ನೆಲೆಯನ್ನು ಗಟ್ಟಿಗೊಳಿಸಿಕೊಂಡಿದೆ.

## ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ

ಕೂಡಲಸಂಗಮ ಅಭಿವೃದ್ಧಿ ಮಂಡಳಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ೨೦೦೭ ರಂದು ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರವನ್ನು ತೆರೆಯಲಾಯಿತು. ಎಸ್.ಎಂ.ಜಾಮದಾರ ಮತ್ತು ಎಂ.ಎಂ. ಕಲಬುರ್ಗಿಯವರ ಪ್ರಯತ್ನದ ಫಲವಾಗಿ ಇದು ಸಾಧ್ಯವಾಯಿತು. ಬಿ.ಎ. ವಿವೇಕರೈ ಅವರ ಕಾಲದಲ್ಲಿ ಈ ಕೇಂದ್ರ ಜಾರಿಗೆ ಬಂದಿತು. ಈ ಕೇಂದ್ರದ ಮೊದಲ ಮುಖ್ಯಸ್ಥರಾಗಿ ಡಾ. ಕೆ.ರವಿಂದ್ರನಾಥ ಅವರನ್ನು ನೇಮಿಸಲಾಯಿತು. ರಾಷ್ಟ್ರೀಯ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ವಚನ ಸಾಹಿತ್ಯದ ಪ್ರಸಾರವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಾಪಿಸುವ ಪ್ರಸಾರಗೊಳಿಸುವ ಉದ್ದೇಶವನ್ನು ಹೊಂದಲಾಗಿದ್ದು ಇಲ್ಲಿ ಪಿಎಚ್.ಡಿ, ಎಂ.ಫಿಲ್ ಪದವಿಗಳನ್ನು ಪಡೆದುಕೊಳ್ಳಲು ಅನುಕೂಲ ಕಲ್ಪಿಸಿದ್ದು ಶರಣರ ಸಾಹಿತ್ಯದ ಕುರಿತು ಸಂಶೋಧನೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

## ಕೂಡಲಸಂಗಮ ಅಭಿವೃದ್ಧಿ ಮಂಡಳಿ

ಕೂಡಲಸಂಗಮ ಕ್ಷೇತ್ರದ ಅಭಿವೃದ್ಧಿಯು ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗುತ್ತಿದ್ದ ಸಂಗಮೇಶ್ವರ ದೇವಸ್ಥಾನ ಮತ್ತು ಕೂಡಲಸಂಗಮ ಬಹುಭಾಗ ಕ್ಷೇತ್ರವನ್ನು ರಕ್ಷಿಸಿ ಅದನ್ನು ಒಂದು ಪ್ರೇಕ್ಷಣೀಯ ಸ್ಥಳವಾಗಿಸುವ ಉದ್ದೇಶದಿಂದ ಪ್ರಾರಂಭವಾಯಿತು. ೧೯೯೭ರಲ್ಲಿ ಕೂಡಲಸಂಗಮ ಅಭಿವೃದ್ಧಿ ಮಂಡಳಿಯನ್ನು ಅಧಿಕೃತವಾಗಿ ರಚಿಸಲಾಯಿತು. ಕರ್ನಾಟಕ ಸರಕಾರವು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಅಧಿನಿಯಮ ೧೯೯೪ನ್ನು ದಿನಾಂಕ:೦೪-೦೨-೧೯೯೮ರ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಜಾರಿಯಲ್ಲಿ ತಂದಿತು. ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಅಧ್ಯಕ್ಷ ಹಾಗು ಸದಸ್ಯರ ಮಂಡಳಿಯನ್ನು ಒಳಗೊಂಡಿದೆ. ಅಭಿವೃದ್ಧಿ ಮಂಡಳಿಯ ರಚನೆಯಾದಾಗಿನಿಂದ ವಿಶೇಷ ಅಧಿಕಾರಿಯಾಗಿ ಡಾ.ಎಸ್.ಎಂ.ಜಾಮದಾರ ಅವರು ಅಭಿವೃದ್ಧಿ ರೂಪುರೇಷೆಗಳನ್ನು ಆಧುನಿಕ ವಿಶೇಷತೆಗಳೊಂದಿಗೆ ತಯಾರಿಸಿಕೊಂಡು ಚಾಲನೆ ನೀಡಿದರು. ಮಹಾದ್ವಾರ, ಸಭಾಭವನ, ಬಸವ ಅಂತಾರಾಷ್ಟ್ರೀಯ ಕೇಂದ್ರ, ಐಕ್ಯ ಮಂಟಪ, ರಥದ ಮನೆ, ದಾಸೋಹ ಭವನ, ಯಾತ್ರಿನಿವಾಸ, ವಚನಸಾಹಿತ್ಯ ಸಂಶೋಧನಾ ಕೇಂದ್ರ ಮತ್ತು ಗ್ರಂಥಾಲಯ, ಕಲ್ಯಾಣ ಮಂಟಪ ಮುಂತಾದ ಕಟ್ಟಡಗಳನ್ನು ಮಂಡಳಿ ನಿರ್ಮಿಸಿ ಸೂಕ್ತ ನಿರ್ವಹಣೆ ಮಾಡುತ್ತಾ ಬಂದಿದೆ. ವರ್ಷದುದ್ದಕ್ಕು ವಿವಿಧ ಸಂದರ್ಭಗಳಲ್ಲಿ ಹಲವಾರು ಮಹತ್ವಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರಲಾಗಿದೆ.

## ವಚನ ಸಾಹಿತ್ಯ : ವಿವಿಧ ಆಯಾಮಗಳು

ವಚನಸಾಹಿತ್ಯ ಜಗತ್ತಿನಲ್ಲಿ ವಿಶಿಷ್ಠ ಮತ್ತು ವಿಶೇಷ ಸಾಹಿತ್ಯವಾಗಿದ್ದು ವಚನಗಳು ಮನುಷ್ಯನ ಜೀವನ ಜ್ಞಾನದೆಡೆಗೆ ಕರೆದೊಯ್ಯುವ ಜ್ಞಾನ ದೀಪವಾಗಿದೆ. ವಚನ ಸಾಹಿತ್ಯ ಗದ್ಯ ಮತ್ತು ಪದ್ಯಗಳ ಮಿಶ್ರಣವಾಗಿದ್ದು ಜನಸಾಮಾನ್ಯರಿಗೂ ಸುಲಭವಾಗಿ ಅರ್ಥವಾಗಲಿರುವ ಸಾಹಿತ್ಯವಾಗಿದೆ. ೧೨ನೇ ಶತಮಾನದಲ್ಲಿ ಬಸವಾದಿ ಶರಣರು ವಚನ ಬರೆಯುವ ಮೂಲಕ ಸಮಾಜ ತಿದ್ದುವ ಕೆಲಸ ಮಾಡುತ್ತಿದ್ದರು. ವಚನಸಾಹಿತ್ಯದ ಹಲವಾರು ಚಿಂತನೆಗಳನ್ನು ತಿಳಿಯಲು ಈ ವಿಚಾರ ಸಂಕಿರಣ ಉಪಯುಕ್ತವಾಗುತ್ತಿದ್ದು ನಾಡಿನ ಹಲವಾರು ಹಿರಿಯ ವಿದ್ವಾಂಸರು, ಸಂಶೋಧಕರು ಹಾಗೂ ವಿಷಯ ಪರಿಣಿತರು ಈ ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ತಮ್ಮ ಪ್ರಬಂಧ ಮಂಡನೆಯ ಮೂಲಕ ವಚನಸಾಹಿತ್ಯದ ವಿವಿಧ ಮಜಲುಗಳನ್ನು ಅರಿಯುವ ಪ್ರಯತ್ನ ಮಾಡಲಾಗುವುದು. ಹಲವಾರು ವಿದ್ಯಾರ್ಥಿಗಳಿಗೆ ವಚನ ಸಾಹಿತ್ಯಾಸಕ್ತರಿಗೆ ಈ ವಿಚಾರ ಸಂಕಿರಣ ಹೊಸ ಸಂಗತಿಗಳನ್ನು ತಿಳಿಸಿಕೊಡುತ್ತದೆ.

### ವಿಷಯಗಳು

೧. ವಚನಸಾಹಿತ್ಯ ಮತ್ತು ಜಾಗತೀಕರಣ
೨. ವಚನಸಾಹಿತ್ಯ ಮತ್ತು ವೃತ್ತಿವೈವಿಧ್ಯತೆ
೩. ವಚನಸಾಹಿತ್ಯ ಮತ್ತು ಸ್ತ್ರೀವಾದ
೪. ವಚನಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯಗಳು
೫. ವಚನಸಾಹಿತ್ಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳು
೬. ವಚನಸಾಹಿತ್ಯ ಮತ್ತು ಆರ್ಥಿಕ ಚಿಂತನೆಗಳು
೭. ವಚನಸಾಹಿತ್ಯ ಮತ್ತು ವೈಜ್ಞಾನಿಕ ಅಂಶಗಳು
೮. ವಚನಸಾಹಿತ್ಯ ಮತ್ತು ವೈದ್ಯಶಾಸ್ತ್ರ
೯. ವಚನಸಾಹಿತ್ಯ ಮತ್ತು ವ್ಯಕ್ತಿತ್ವ ವಿಕಸನ
೧೦. ವಚನಸಾಹಿತ್ಯ ಮತ್ತು ದಾಂಪತ್ಯ ಜೀವನ
೧೧. ವಚನಸಾಹಿತ್ಯ ಮತ್ತು ಶೈಕ್ಷಣಿಕ ಮೌಲ್ಯಗಳು
೧೨. ವಚನಸಾಹಿತ್ಯ ಮತ್ತು ಮಾನವಶಾಸ್ತ್ರ
೧೩. ವಚನಸಾಹಿತ್ಯ ಮತ್ತು ಯೋಗ ವಿಜ್ಞಾನ
೧೪. ವಚನಸಾಹಿತ್ಯ ಮತ್ತು ಕೃಷಿ ವಿಜ್ಞಾನ
೧೫. ಭಾರತೀಯ ಕಾನೂನುಗಳು ಮತ್ತು ವಚನಸಾಹಿತ್ಯ
೧೬. ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಇನ್ನಿತರ ವಿಷಯಗಳು